**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ. ತಳವಾರ ಸಾಬಣ್ಣಾ ರವರು**
**ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ಪ್ರಶ್ನೆ:** ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಗ್ರಾಮದಲ್ಲಿ ಕಳೆದ ಹದಿನೈದು ದಿನಗಳ ಕೆಳಗೆ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಧ್ವಜದ ಕಟ್ಟೆ ಹಾಗೂ ನಾಮಫಲಕವನ್ನು ಗ್ರಾಮದ ಹನುಮಾನ ದೇವಾಲಯದ ಪಕ್ಕದಲ್ಲಿ ನೆಟ್ಟಿರುವುದನ್ನು ಸಹಿಸಿಕೊಳ್ಳದ ಮಳಖೇಡ ಪಿ.ಎಸ್.ಐ. ಅವರು ಗ್ರಾಮದ ಹಿರಿಯರ ಮೇಲೆ ಒತ್ತಡ ಹಾಕಿ ಧ್ವಜವನ್ನು ತೆರವುಗೊಳಿಸುವಂತೆ ಒತ್ತಾಯಿಸುತ್ತಿದ್ದಾರೆ. ಗ್ರಾಮದ ಸಮಾಜದಲ್ಲಿ ಸದಾ ಮುಂದೆ ನಿಂತು ಎಲ್ಲಾ ಕಾರ್ಯಗಳಿಗೂ ಮುಂದಾಳತ್ವವಹಿಸಿಕೊಂಡು ಬರುತ್ತಿದ್ದ ಶ್ರೀ ಹಣಮಂತಪ್ಪ ಭಾವನೋರ ಇವರಿಗೆ ಪಿ.ಎಸ್.ಐ. ನಿರಂತರವಾಗಿ ಕಿರುಕುಳ ಕೊಟ್ಟಿರುವುದರ ಪರಿಣಾಮವಾಗಿ ಮನನೊಂದು ಹಣಮಂತಪ್ಪನವರು ವಿಷ ಸೇವಿಸಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಆದಕಾರಣ ಪಿ.ಎಸ್.ಐ. ಅವರೇ ನೇರ ಹೊಣೆಗಾರರಾಗಿದ್ದು, ಅವರಿಗೆ ಸೇವೆಯಿಂದ ವಜಾ ಮಾಡುವವರೆಗೂ ಮಳಖೇಡ ಪೊಲೀಸ್ ಠಾಣೆಯ ಮುಂದೆ ಹೋರಾಟ ಮಾಡಲು ನಿರ್ಧರಿಸಿದ್ದು ದಿನಾಂಕ:12.08.2025 ಮಂಗಳವಾರು ಬೆಳಿಗ್ಗೆ 11.00 ಗಂಟೆಗೆ ಮಳಖೇಡ ಪೊಲೀಸ್ ಠಾಣೆಯ ಎದುರು ತಾಲ್ಲೂಕಿನ ಕೋಲಿ/ಕಬ್ಬಲಿಗ ಸಮಾಜ ಬಾಂಧವರು ಹೋರಾಟ ಮಾಡುತ್ತಿದ್ದಾರೆ. ಇವರಿಗೆ ತಾವುಗಳು ಸೂಕ್ತ ಭದ್ರತೆ ಒದಗಿಸಬೇಕು. ಈ ಹಿನ್ನಲೆಯಲ್ಲಿ ಮಳಖೇಡ ಪಿ.ಎಸ್.ಐ. ಅವರನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಿ, ಕೊಂಕನಹಳ್ಳಿ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವ ಧ್ವಜದ ಕಟ್ಟೆ ತೆರವುಗೊಳಿಸದೆ ಹಾಗೆಯೇ ಇರುವಂತೆ ಮಾಡಿ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂಬುದರ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಉತ್ತರ:**

ಸೇಡಂ ತಾಲ್ಲೂಕಿನ ಕೊಂಕನಹಳ್ಳಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಪಾಟೀಲ ಇವರಿಗೆ ಸೇರಿದ ಜಮೀನು ಸರ್ವೆ ನಂ: 01 ರಲ್ಲಿ ದಿನಾಂಕ:25-07-2025ರ ಮಧ್ಯರಾತ್ರಿ ಯಾರೋ ಅಂಬಿಗರ ಚೌಡಯ್ಯನವರ ಮೆಟಾಲಿಕ್ ಧ್ವಜಸ್ತಂಭ ಸ್ಥಾಪಿಸಿರುತ್ತಾರೆ. ಅದರಂತೆ ಮಲ್ಲಿಕಾರ್ಜುನ ಪಾಟೀಲ್ ರವರು ಮಳಖೇಡ ಪೊಲೀಸ್ ಠಾಣೆಗೆ ಬಂದು ಸದರಿ ವಿಷಯದ ಕುರಿತು ಅರ್ಜಿ ಸಲ್ಲಿಸಿದ್ದು ಇರುತ್ತದೆ. ಪಿ.ಎಸ್.ಐ ರವರು ಸದರಿ ವಿಷಯದ ಕುರಿತು ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆ ಆಗದಂತೆ ನಿಗಾ ವಹಿಸಿರುತ್ತಾರೆ. ದಿನಾಂಕ:05-08-2025 ರಂದು ವಿ.ಎ., ಆರ್.ಐ, ರವರೊಂದಿಗೆ ಪಿ.ಎಸ್.ಐ ರವರು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆ ಸಂದರ್ಭದಲ್ಲಿ ಆರ್.ಐ ರವರು ಅಂಬಿಗರ ಚೌಡಯ್ಯ ಸಮಾಜಕ್ಕೆ ಸೇರಿದ ಹಿರಿಯರಿಗೆ ಸದರಿ ಜಾಗವು ಮಲ್ಲಿಕಾರ್ಜುನ ಪಾಟೀಲ ಇವರಿಗೆ ಸೇರಿದ್ದು, ಖಾಸಗಿ ಜಾಗ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ ಅಲ್ಲಿ ಸೇರಿದ್ದ ಹಿರಿಯರು ಹಾಕಿದಂತಹ ಧ್ವಜಸ್ತಂಭ ತೆರವುಗೊಳಿಸುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಅದರಂತೆ ದಿನಾಂಕ: 06.08.2025 ರಂದು ತೆರವುಗೊಳಿಸಿರುತ್ತಾರೆ. ಮುಂದಾಳತ್ವ ವಹಿಸಿಕೊಂಡು ಬರುತ್ತಿದ್ದ ಶ್ರೀ.ಹಣಮಂತ ಭಾವನೂರ ಇವರಿಗೆ ಪಿ.ಎಸ್.ಐ ಮಳಖೇಡ ರವರು ಯಾವುದೇ ರೀತಿಯ ಕಿರುಕುಳ ನೀಡಿರುವುದಿಲ್ಲ. ಆರ್.ಐ ಮತ್ತು ವಿ.ಎ. ರವರು ಅಂಬಿಗರ ಚೌಡಯ್ಯ ಸಮಾಜದ ಹಿರಿಯರಿಗೆ ಧ್ವಜಸ್ತಂಭ ತೆರವುಗೊಳಿಸುವಂತೆ ಮನವೊಲಿಸಿ ತೆರವುಗೊಳಿಸಿರುತ್ತಾರೆ.

---

ಹೆಚ್‌ಡಿ 404 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.